# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ಶಂಕರಮಠ ವಾರ್ಡ್ ಸಂಖ್ಯೆ: 75,
15ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79.

ಸಂಖ್ಯೆ: ವಾ-75/ವಾ.ಸ./ಸಭಾನಡವಳಿ-07/2020-21 ದಿನಾಂಕ: 19/12/2020

## -:ಸಭೆಯ ನಡವಳಿಗಳು:-

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 19/12/2020 ಶನಿವಾರದಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್-75 ಶಂಕರಮಠದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಪುಟ್ಟಸ್ವಾಮಿ ಸಮಿತಿಯ, ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ. ಎಲ್. ಸುರೇಶ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್-75 |
| 2 | ಶ್ರೀ ಹೆಚ್. ರಂಗನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಾಗಪುರ ಉಪವಿಭಾಗ. |
| 3 | ಶ್ರೀ ಪುಟ್ಟಸ್ವಾಮಿ, ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ವಾರ್ಡ್-75. |
| 4 | ಶ್ರೀ ಜಿ.ಆರ್.ಗೋವಿಂದ ರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-75 |
| 5 | ಶ್ರೀ ಲೋಕೇಶ್, ಹಿರಿಯ ವೆಟರಿನರಿ ಪರಿವೀಕ್ಷಕರು, ವಾರ್ಡ್-75 |
| 6 | ಶ್ರೀ ಸಿದ್ದರಾಮೇಶ್ವರ್.ಆರ್.ಎಸ್. ಕಂದಾಯ ಪರಿವೀಕ್ಷಕರು ವಾ-75 |
| 7 | ಶ್ರೀ ಅನಿಲ್ ಕುಮಾರ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-75 |
| 8 | ಶ್ರೀಮತಿ ಡಾ. ಕುಸುಮ, ಎಲ್.ಎಮ್.ಓ. ಆರೋಗ್ಯ ಇಲಾಖೆ, ಪಶ್ಚಿಮ, ಬಿಬಿಎಂಪಿ. |
| 9 | ಶ್ರೀಮತಿ ಮಂಜುಳಾ.ಎಸ್, ಜೂನಿಯರ್ ಹೆಚ್.ಎ.ಎಫ್. ಆರೋಗ್ಯ ಇಲಾಖೆ, ಪಶ್ಚಿಮ, ಬಿಬಿಎಂಪಿ. |
| 10 | ಶ್ರೀ ಬಿ.ಕೆ.ಶಂಕರ್ ರಾಜ್, ಸಹಾಯಕ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ. |
| 11 | ಶ್ರೀ ಗಿರೀಶ್, ಸಹಾಯಕ ಅಭಿಯಂತರರು, ಎನ್-7, ಬೆಸ್ಕಾಂ, ಕುರುಬರಹಳ್ಳಿ, |
| 12 | ಶ್ರೀ ಎನ್. ಮಂಜುನಾಥ್, ಗಾರ್ಡನರ್, ತೋಟಗಾರಿಕೆ ಇಲಾಖೆ, ಬಿಬಿಎಂಪಿ. |
| 13 | ಶ್ರೀ ಎಮ್ಯಾನ್ಯುಯಲ್, ವಾರ್ಡ್ ಮಾರ್ಷಲ್, ಬಿಬಿಎಂಪಿ. |
| 14 | ಶ್ರೀ ಮನೋಜ್.ಕೆ. ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರು. |
| 15 | ಶ್ರೀ ಮಂಜುನಾಥ್.ಹೆಚ್.ಸಿ. ಪಿ.ಎಸ್.ಐ, ವಿಜಯನಗರ ಸಂಚಾರಿ ಪೊಲೀಸ್ ಠಾಣೆ. |
| 16 | ಶ್ರೀ ಸುಮೇಶ್‌ಬಾಬುರಾವ್, ಎ.ಎಸ್.ಐ. ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆ. |
| 17 | ಶ್ರೀ ಹನುಮಂತ ವಿ., ಕಾಮಗಾರಿ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 18 | ಶ್ರೀ ಬಿ. ಶಿವಪ್ಪ, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 19 | ಶ್ರೀ ಸಿದ್ದರಾಜು ಸೋಸಲೆ, ವಾರ್ಡ್‌ನ ನಾಗರೀಕರು. |
| 20 | ಶ್ರೀ ಬಿ.ಸಿ.ರವೀಶ್, ವಾರ್ಡ್‌ನ ನಾಗರೀಕರು |

ಮುಂದುವರೆಯುವುದು....(2)

Scanned by CamScanner

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

1 **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-75 ಶಂಕರಮಠದಲ್ಲಿ ಕೋವಿಡ್-19 ಸೋಂಕಿತರನ್ನು ಪತ್ತೆ ಹಚ್ಚಲು ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಡಾ.ಕುಸುಮ ರವರಿಗೆ ಸಭೆಯಲ್ಲಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಡಾ.ಕುಸುಮ ರವರು ಮಾತನಾಡುತ್ತಾ, ಸದರಿ ವಾರ್ಡ್‌ನಲ್ಲಿ ಇಲ್ಲಿಯವರೆಗೆ ಒಟ್ಟು 983 ಸಂಖ್ಯೆಯಷ್ಟಿದ್ದು, ಇದರಲ್ಲಿ 28 ಸಂಖ್ಯೆಯಷ್ಟು ಡೆತ್ ಕೇಸ್ ಆಗಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಮೆಡಿಸಿನ್ ಕಿಟ್‌ಗಳನ್ನು ಸ್ಟೋರ್ ಮಾಡಲು ವಾರ್ಡ್ ವ್ಯಾಪ್ತಿಯಲ್ಲಿ ಸ್ಟೋರೇಜ್ ರೂಮ್ ಅನ್ನು ಸ್ಥಾಪಿಸಲು ಯಾವುದೇ ಜಾಗಗಳಿರುವುದಿಲ್ಲವೆಂದು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುವುದರಿಂದ ಮುಂದಿನ ದಿನಗಳಲ್ಲಿ ಲಭ್ಯವಿರುವ ಅನುದಾನದಡಿಯಲ್ಲಿ ಮೆಡಿಕಲ್ ಸ್ಟೋರೇಜ್ ರೂಮ್ ಕಟ್ಟಡವನ್ನು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಿದರು.

2 **ಅಭಿಯಂತರರ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ತಿಳಿಸಿಂತೆ ವಾರ್ಡ್ ವ್ಯಾಪ್ತಿಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣದ ಅವಶ್ಯಕತೆ ಹಾಗೂ ದುಸ್ಥಿತಿಯಲ್ಲಿರುವ ಪಾದಚಾರಿ ಮಾರ್ಗಗಳ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು.
- ಸಹಾಯಕ ಅಭಿಯಂತರರು ವಾರ್ಡ್-75 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯವನ್ನು/ಗಳನ್ನು ನಿರ್ಮಿಸಲು ಸೂಕ್ತವಾದ ಸ್ಥಳಗಳು ಲಭ್ಯವಿಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿದರು. ಹಾಗೂ ಹಿಂದಿನ ಸಭೆಯಲ್ಲಿ ಶ್ರೀ ಭಾಸ್ಕರ್ ಹಾಗೂ ಶ್ರೀ ಸಿದ್ದರಾಜು ಸೋಸಲೆ ರವರುಗಳು ನೀಡಿದ ದೂರಿನನ್ವಯ ವಾರ್ಡ್‌ನ ಕೆಲವು ರಸ್ತೆಗಳಲ್ಲಿ ಚರಂಡಿಗಳಲ್ಲಿನ ಒಡೆದುಹೋದ ಚಪ್ಪಡಿ ಕಲ್ಲುಗಳನ್ನು ಸರಿಪಡಿಸಿಲಾಗಿದ್ದು, ಹಾಗೂ ಭಾಗ್ಯದ ಬಾಗಿಲು ರಸ್ತೆಯ ಹಾಗೂ ಕೃಷ್ಣ ರಸ್ತೆಯ ಪಾದಾಚಾರಿ ಮಾರ್ಗಗಳಲ್ಲಿ ಇರುವ ಡೆಬ್ರಿಸ್‌ಗಳನ್ನು ತೆರವುಗೊಳಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಬೋರ್‌ವೆಲ್‌ಗಳು ಮತ್ತು ಪೈಪ್‌ಗಳು ದುರಸ್ತಿಗೊಂಡಿರುವುದಾಗಿ ಶ್ರೀ ಎಮ್. ಶಿವರಾಜು, ಮಾಜಿ ಸದಸ್ಯರು, ಬಿಬಿಎಂಪಿ ರವರು ಪತ್ರ ಮುಖೇನ ಸಭೆಗೆ ತಿಳಿಸಿರುತ್ತಾರೆ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ ನೀಡಲು ಸಹಾಯಕ ಅಭಿಯಂತರರಿಗೆ ತಿಳಿಸಿದರು.
- ಸಹಾಯಕ ಅಭಿಯಂತರರು ವಾರ್ಡ್-75 ರವರು ಮಾತನಾಡುತ್ತಾ, ಸದರಿ ಕಡತವನ್ನು ಪರಿಶೀಲಿಸಲಾಗಿ ದುರಸ್ತಿಗೊಂಡಿರುವ ಬೋರ್‌ವೆಲ್‌ಗಳು ಮತ್ತು ಪೈಪ್‌ಗಳನ್ನು ಗುರುತಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರ ನಿರ್ದೇಶನಂತೆ ಸೂಕ್ತ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

3 **ಆರೋಗ್ಯ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಮೆಡಿಕಲ್ ವೇಸ್ಟ್ ಡಿಸ್ಪೋಸ್ ಮಾಡುವುದನ್ನು ಸರಿಯಾಗಿ ನಿರ್ವಹಣೆ ಮಾಡಲು ಸೂಕ್ತ ಕ್ರಮವಹಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ಶ್ರೀಗೋವಿಂದರಾಜುಲು ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳು ಹಾಗೂ ಟೆಸ್ಟಿಂಗ್ ಲ್ಯಾಬ್‌ಗಳಿಗೆ ಭೇಟಿ ನೀಡಿ ಮೆಡಿಕಲ್ ವೇಸ್ಟ್‌ಗಳನ್ನು ಸರಿಯಾದ ರೀತಿಯಲ್ಲಿ ಡಿಸ್ಪೋಸ್ ಮಾಡುವಂತೆ ಸೂಚಿಸಲಾಗಿರುವುದಾಗಿ ಸಭೆಗೆ ತಿಳಿಸಿದರು.

4 **ವಿದ್ಯುತ್ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಸಾರ್ವಜನಿಕರ ಉದ್ಯಾನವನದಲ್ಲಿ ವಾಯುವಿಹಾರಕ್ಕೆ ಅನುಕೂಲವಾಗಲು ಹಾಕಿರುವ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವಾಗಿ, ಶ್ರೀ ಎಮ್. ಶಿವರಾಜು, ಮಾಜಿ ಸದಸ್ಯರು, ಬಿಬಿಎಂಪಿ ರವರು ಪತ್ರ ಮುಖೇನ ಸಭೆಗೆ ತಿಳಿಸಿರುತ್ತಾರೆ ಅದರ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ ನೀಡಲು ತಿಳಿಸಿದರು.

ಮುಂದುವರೆಯುವುದು....(3)

Scanned by CamScanner

- ಮಾನ್ಯ ನೋಡಲ್ ಅಧಿಕಾರಿಯವರು ಸಹಾಯಕ ಅಭಿಯಂತರರು ವಿದ್ಯುತ್ ವಿಭಾಗ ರವರಿಗೆ ದೂರವಾಣಿಯ ಮುಖಾಂತರ ಮಾತನಾಡುತ್ತಾ, ಶ್ರೀ ಎಮ್. ಶಿವರಾಜು, ಮಾಜಿ ಸದಸ್ಯರು, ಬಿಬಿಎಂಪಿ ರವರ ಪತ್ರದಂತೆ ದೂರು ನೀಡಲಾಗಿರುವ ಬೀದಿ ದೀಪಗಳನ್ನು ಗುರುತಿಸಿ ಸರಿಪಡಿಸುವುದು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಮಾಡಬೇಕಾಗಿ ತಿಳಿಸಿದರು.
- ಶ್ರೀ ಸಿದ್ದರಾಜು ಸೋಸಲೆ (ವಾರ್ಡ್‌ನ ನಾಗರೀಕರು) ರವರು ಮಾತನಾಡುತ್ತಾ, ಕುರುಬರಹಳ್ಳಿಯಲ್ಲಿನ ಶ್ರೀ ವೆಂಕಟೇಶ್ವರ ದೇವಸ್ಥಾನ ರಸ್ತೆಯಲ್ಲಿ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ದೂರಿದರು.
- ಶ್ರೀ ರವೀಶ್ (ವಾರ್ಡ್‌ನ ನಾಗರೀಕರು) ರವರು ಮಾತನಾಡುತ್ತಾ, ಕುರುಬರಹಳ್ಳಿಯಲ್ಲಿನ ಕೆಂಪೇಗೌಡ ಆಟದ ಮೈದಾನದಲ್ಲಿ ವಿದ್ಯುತ್ ದೀಪಗಳಿಲ್ಲದ ಕಾರಣ ರಾತ್ರಿ ವೇಳೆಯಲ್ಲಿ ಪೋಲಿ ಹುಡುಗರು ಹಾಗೂ ಮದ್ಯ ವ್ಯಸನಿಗಳು ಹಾವಳಿ ಇಡುತ್ತಿರುವುದಾಗಿ ಸಭೆಯಲ್ಲಿ ದೂರಿದರು.
- ಸದರಿ ಸ್ಥಳಗಳಲ್ಲಿನ ವಿದ್ಯುತ್ ದೀಪಗಳನ್ನು ಗುರುತಿಸಿ ಶೀಘ್ರವಾಗಿ ಸರಿಪಡಿಸಲು ಸೂಕ್ತ ಕ್ರಮವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಬೀದಿ ದೀಪಗಳ ನಿರ್ವಹಣಾ ಗುತ್ತಿಗೆದಾರರಿಗೆ ತಿಳಿಸಿದರು.

5 <u>ಪಶುಪಾಲನೆ ವಿಭಾಗದ ಬಗ್ಗೆ:-</u>

- ಮಾನ್ಯ ನೋಡಲ್ ಅಧಿಕಾರಿ ರವರು ಮಾತನಾಡುತ್ತಾ, ಬೀದಿ ನಾಯಿಗಳ ತಾವು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರಣೆಯನ್ನು ನೀಡಲು ಸಭೆಯಲ್ಲಿ ಹಾಜರಿದ್ದ ಶ್ರೀ ಕೆ.ವಿ.ಲೊಕೇಶ್, ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರಲ್ಲಿ ಕೇಳಿದರು.
- ಶ್ರಿ ಕೆ.ವಿ.ಲೊಕೇಶ್, ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ಪರಿವೀಕ್ಷಣೆ ನಡೆಸಿ ಬೀದಿ ನಾಯಿಗಳು ಹೆಚ್ಚಾಗಿ ಕಂಡುಬರುವ ಪ್ರದೇಶಗಳಲ್ಲಿ ನಾಯಿಗಳನ್ನು ಹಿಡಿದುಕೊಂಡು ಹೋಗಿರುವುದಾಗಿಯೂ ಅದರ ಬಗ್ಗೆ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ವರದಿ ಮಾಡಿರುವುದಾಗಿ ತಿಳಿಸಿದರು.

6 <u>ತೋಟಗಾರಿಕೆ ವಿಭಾಗದ ಬಗ್ಗೆ:-</u>

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ಶ್ರೀ ರವೀಶ್ (ವಾರ್ಡ್‌ನ ನಾಗರೀಕರು) ಕೆಂಪೇಗೌಡ ಉದ್ಯಾನವನದ ಕಸಗಳನ್ನು ಕೃಷ್ಣ ರಸ್ತೆಯ ಪಾದಚಾರಿಮಾರ್ಗದ ಮೇಲೇ ಹಾಕುತ್ತಿರುತ್ತಾರೆ. ಹಾಗೂ ವಾರ್ಡ್‌ನಲ್ಲಿನ ಉದ್ಯಾನವನಗಳಲ್ಲಿ ಸರಿಯಾಗಿ ಕಸದ ವಿಲೇವಾರಿ ಮಾಡುತ್ತಿಲ್ಲವೆಂದು ದೂರು ನೀಡಿರುತ್ತಾರೆ. ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ ನೀಡಲು ಸಭೆಯಲ್ಲಿ ಹೇಳಿದರು.
- ಇದಕ್ಕೆ ಪ್ರತಿಯಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಮಂಜುನಾಥ್ ರವರು ಮಾತನಾಡುತ್ತಾ, ಕೃಷ್ಣ ರಸ್ತೆಯ ಪಾದಚಾರಿಮಾರ್ಗದ ಮೇಲಿರುವ ಉದ್ಯಾನವನದ ಕಸಗಳನ್ನು ಈಗಾಗಲೇ ತೆರವುಗೊಳಿಸಿ ಈ ಬಗ್ಗೆ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ವರದಿ ಮಾಡಲಾಗಿರುವುದಾಗಿ ಹಾಗೂ ಉದ್ಯಾನವನದ ಸ್ವಚ್ಛತೆಯನ್ನು ಕಾಪಾಡಲು ಸೂಕ್ತ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

7 <u>ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-</u>

- ಶ್ರೀ ರವೀಶ್ (ವಾರ್ಡ್‌ನ ನಾಗರೀಕರು) ಮಾತನಾಡುತ್ತಾ, ಕರ್ನಾಟಕ ಲೇಔಟ್‌ನಲ್ಲಿರುವ ಶ್ರೀಲಕ್ಷ್ಮೀವೆಂಕಟೇಶ್ವರ ದೇವಸ್ಥಾನದ ಬಳಿಯಿರುವ ಖಾಲಿ ನಿವೇಶನದಲ್ಲಿ ಸಾರ್ವಜನಿಕರು ಹಾಗೂ ದೇವಾಲಯದ ಕಸಗಳನ್ನು ಹಾಕುತ್ತಿರುವುದಾಗಿ ಸಭೆಯಲ್ಲಿ ಹೇಳಿದರು.
- ಅನಿಲ್ ಕುಮಾರ್, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಶ್ರೀಲಕ್ಷ್ಮೀವೆಂಕಟೇಶ್ವರ ದೇವಸ್ಥಾನಕ್ಕೆ ಒಂದು ಕಸದ ಬುಟ್ಟಿಯನ್ನು ಇಟ್ಟುಕೊಳ್ಳಲು ಸೂಚಿಸುವುದಾಗಿ ಮತ್ತು ಪಾದಚಾರಿಮಾರ್ಗದಲ್ಲಿನ ಬೇರೆ ಕಸಗಳನ್ನು ಶೀಘ್ರವಾಗಿ ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

8 <u>ಕಂದಾಯ ವಿಭಾಗದ ಬಗ್ಗೆ:-</u>

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಕಂದಾಯ ಸಂಗ್ರಹಣೆಗಾಗಿ ತೆಗೆದುಕೊಂಡಿರುವ ಕ್ರಮಗಳು ಹಾಗೂ ಸಂಗ್ರಹವಾದ ಕಂದಾಯ ಬಗ್ಗೆ ವರದಿ ನೀಡುವಂತೆ ಕಂದಾಯ ಪರಿವೀಕ್ಷಕರು ವಾಡ್-75 ರವರಿಗೆ ತಿಳಿಸಿದರು.

ಮುಂದುವರೆಯುವುದು....(4)

Scanned by CamScanner

➢ ಶ್ರೀಸಿದ್ದರಾಮೇಶ್ವರ್ (ಕಂದಾಯ ಪರಿವೀಕ್ಷಕರು ವಾರ್ಡ್-75) ರವರು ಮಾತನಾಡುತ್ತಾ, ಸರಿಯಾದ ರೀತಿಯಲ್ಲಿ ಕಂದಾಯ ಪಾವತಿಯಾಗುತ್ತಿದ್ದು, ಕಂದಾಯ ಪಾವತಿಸದ ಕೆಲವು ಕಟ್ಟಡದ ಮಾಲೀಕರಿಗೆ ನೋಟೀಸ್ ನೀಡುವುದಾಗಿ ಸಭೆಗೆ ತಿಳಿಸಿ ಕಂದಾಯದ ವಿವರಗಳನ್ನು ಸಭೆಗೆ ನೀಡಿದರು.

9 ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-

➢ ಮಾನ್ಯ ನೋಡಲ್ ಅಧಿಕಾರಿರವರು ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ತಮಗೆ ಸಂಬಂಧಿಸಿದಂತೆ 15ನೇ ಮುಖ್ಯರಸ್ತೆಯಲ್ಲಿ ನೀರು ಸೋರುವಿಕೆಯನ್ನು ಸರಿಪಡಿಸಲು ರಸ್ತೆಯನ್ನು ಅಗೆದಿರುವ ದೂರಿಗೆ ತಾವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವರ್ಕ್ ಇನ್ಸ್‌ಪೆಕ್ಟರ್‌ರವರಿಗೆ ತಿಳಿಸಿದರು.

➢ ಶ್ರೀ ಹನುಮಂತಪ್ಪ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವರ್ಕ್ ಇನ್ಸ್‌ಪೆಕ್ಟರ್‌ರವರು ಮಾತನಾಡುತ್ತಾ, 15ನೇ ಮುಖ್ಯರಸ್ತೆಯಲ್ಲಿ ನೀರು ಸೋರುವಿಕೆಯನ್ನು ಸರಿಪಡಿಸಲು ರಸ್ತೆ ಅಗೆತ ಮಾಡಲಾಗಿರುತ್ತದೆ. ರಸ್ತೆಯ ಅಗೆದ ಭಾಗವನ್ನು ಸರಿಪಡಿಸಲು ಸೂಕ್ತ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

10 ಬೆಸ್ಕಾಂ ವಿಭಾಗದ ಬಗ್ಗೆ:-

➢ ಶ್ರೀ ರವೀಶ್ (ವಾರ್ಡ್‌ನ ನಾಗರೀಕರು) ಮಾತನಾಡುತ್ತಾ, ಬೆಸ್ಕಾಂ ವತಿಯಿಂದ ಜೆ.ಸಿ.ನಗರ 15ನೇ ಮುಖ್ಯರಸ್ತೆ, 13ನೇ ಮುಖ್ಯರಸ್ತೆ ಹಾಗೂ 3ನೇ ಅಡ್ಡರಸ್ತೆಗಳನ್ನು ಕೇಬಲ್ ಅಳವಡಿಸಲು ರಸ್ತೆಗಳನ್ನು ಅಗೆದು ಹಾಳುಮಾಡಿರುತ್ತಾರೆ ಹಾಗೂ ತುಂಬಾ ದಿನಗಳಾದರೂ ಅದನ್ನು ಸರಿಪಡಿಸದೇ ಹಾಗೇ ಬಿಟ್ಟಿರುತ್ತಾರೆ. ಇದರಿಂಣವಾಗಿ ಜನ ಸಂಚಾರಕ್ಕೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ದೂರಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಕೂಡಲೇ ಸದರಿ ರಸ್ತೆಗಳಲ್ಲಿ ಅಗೆದಿರುವ ಭಾಗಗಳನ್ನು ಸರಿಪಡಿಸಲು ಸೂಕ್ತ ಕ್ರಮ ವಹಿಸುವಂತೆ ಈಗಾಗಲೇ ತಮ್ಮ ಇಲಾಖೆಗೆ ನೋಟೀಸ್ ನೀಡಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸದರಿ ರಸ್ತೆಗಳನ್ನು ಶೀಘ್ರವಾಗಿ ಸರಿಪಡಿಸುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಗಿರೀಶ್ ಸಹಾಯಕ ಅಭಿಯಂತರರು ಬೆಸ್ಕಾಂ ಎನ್-7 ರವರಿಗೆ ತಿಳಿಸಿದರು.

➢ ಶ್ರೀ ಸಿದ್ದರಾಜು ಸೋಸಲೆ (ವಾರ್ಡ್‌ನ ನಾಗರೀಕರು) ಮಾತನಾಡುತ್ತಾ, ಇಂಡಿಯನ್ ಶಾಲೆಯ ಬಳಿಯಿರುವ ಟ್ರಾನ್ಸ್‌ಫಾರ್ಮರ್ ಕಂಬದಲ್ಲಿ ಕರೆಂಟ್ ವೈರ್‌ಗಳು ಮಕ್ಕಳಿಗೆ ಕೈಗೆಟುಕುವ ಅಂತರದಲ್ಲಿದ್ದು, ಇನ್ನು ಕೆಲವು ದಿನಗಳಲ್ಲಿ ಶಾಲೆಗಳು ಆರಂಭವಾಗಲಿರುವುದರಿಂದ ವಿದ್ಯಾರ್ಥಿಗಳಿಗೂ ಸಮಸ್ಯೆ ಹಾಗೂ ಅಪಘಾತವಾಗುವ ಸಂಭವವಿರುವುದಾಗಿ ಸಭೆಯಲ್ಲಿ ದೂರಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಕೂಡಲೇ ಸದರಿ ರಸ್ತೆಯಲ್ಲಿ ಆ ವಿದ್ಯುತ್ ಕಂಬವನ್ನು ಗುರುತಿಸಿ ಮುಂದೆ ಯಾವುದೇ ಅಪಘಾತಗಳು ಸಂಭವಿಸುವ ಮುನ್ನ ಅದನ್ನು ಬಗೆಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಶಂಕರ್ ರಾಜ್ ಸಹಾಯಕ ಅಭಿಯಂತರರು ಬೆಸ್ಕಾಂ ಎನ್-3 ರವರಿಗೆ ಸಭೆಯಲ್ಲಿ ತಿಳಿಸಿರು.

11 ಪೋಲೀಸ್ ವಿಭಾಗದ ಬಗ್ಗೆ:-

➢ ಶ್ರೀ ರವೀಶ್ (ವಾರ್ಡ್‌ನ ನಾಗರೀಕರು) ಮಾತನಾಡುತ್ತಾ, ಕೆಂಪೇಗೌಡ ಆಟದ ಮೈದಾನದಲ್ಲಿ ರಾತ್ರಿ ವೇಳೆಯಲ್ಲಿ ಮದ್ಯ ವ್ಯಸನಿಗಳು ಹಾಗೂ ಪೋಲೀ ಹುಡುಗರು ಅಲೆದಾಡುತ್ತಿರುವುದಾಗಿ ಸಭೆಯಲ್ಲಿ ದೂರಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ರಾತ್ರಿ ವೇಳೆಯಲ್ಲಿ ಕೆಂಪೇಗೌಡ ಆಟದ ಮೈದಾನ ಹಾಗೂ ವಾರ್ಡ್‌ನ ಇನ್ನಿತರೆ ಸೂಕ್ಷ್ಮ ಪ್ರದೇಶಗಳಲ್ಲಿ ಹೊಯ್ಸಳದಲ್ಲಿ ಗಸ್ತು ತಿರುಗುವಂತೆ ಸಭೆಯಲ್ಲಿ ಹಾಜರಿದ್ದ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದರು.

12 ಸಂಚಾರಿ ಪೋಲೀಸ್ ವಿಭಾಗದ ಬಗ್ಗೆ:-

➢ ಶ್ರೀ ಸಿದ್ದರಾಜು ಸೋಸಲೆರವರು ಮಾತನಾಡುತ್ತಾ, ಕುರುಬರಹಳ್ಳಿಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಾಲಯದ ಎದುರುಗಡೆ ಟಿಟಿ ಗಾಡಿಯು ತುಂಬಾ ತಿಂಗಳುಗಳಿಂದ ನಿಂತಿದ್ದು, ಇದುವರೆವಿಗೂ ಯಾವುದೇ ವಾರಸುದಾರು ಅದನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದು ಸಭೆಯಲ್ಲಿ ದೂರಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಗಾಡಿಯನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಮುಂದುವರೆಯುವುದು....(5)

Scanned by CamScanner

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ಶ್ರೀ ರವೀಶ್ (ವಾರ್ಡ್‌ನ ನಾಗರೀಕರು) ನೀಡಿದ ದೂರಿನಂತೆ ಕಾವೇರಿನಗರ ವೃತ್ತದ ಬಳಿ ಹಾಗೂ ಕುರುಬರಹಳ್ಳಿ ವೃತ್ತದ ಬಳಿ ಅತೀ ಹೆಚ್ಚು ವಾಹನಗಳು ಸಂಚರಿಸುತ್ತಿರುವುದರಿಂದ ವಾಹನ ಅಪಘಾತಗಳು ಸಂಬಂಪಿಸುವ ಸಂದರ್ಭವಿರುತ್ತದೆ. ಆದ್ದರಿಂದ ಸದರಿ ಸ್ಥಳಗಳಲ್ಲಿ ಸಂಚಾರಿ ಪೋಲೀಸರನ್ನು ಆಯೋಜಿಸಿ ವಾಹನ ಸಂಚಾರ ನಿಯಂತ್ರಣಗೊಳಿಸುವ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ತಿಳಿಸಿದರು.
- ಶ್ರೀ ಮಂಜುನಾಥ್.ಹೆಚ್.ಸಿ. ಪಿ.ಎಸ್.ಐ, ಟ್ರಾಫಿಕ್ ಪೋಲೀಸ್ ರವರು ಮಾತನಾಡುತ್ತಾ, ಕುರುಬರಹಳ್ಳಿ ಮತ್ತು ಗುರುಸಾಗರ್ ಹೋಟೆಲ್ ಜಂಕ್ಷನ್ ಬಳಿಯಲ್ಲಿ ಪೋಲೀಸರನ್ನು ನಿಯೋಜಿಸಲು ಮೇಲಾಧಿಕಾರಿಗಳಿಗೆ ತಿಳಿಸುವುದಾಗಿ ಹಾಗೂ ಕಾವೇರಿನಗರ ವೃತ್ತದ ಬಳಿಯಲ್ಲಿ ಪೋಲೀಸ್‌ರೊಬ್ಬರನ್ನು ನಿಯೋಜಿಸಲು ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆಗೆ ತಿಳಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.

ಮುಂದುವರೆದು, ಪ್ರತೀ ಸಭೆಯ ಸಭಾನಡವಳಿಗಳನ್ನು ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ತಲುಪುವಂತೆ ಮಾಡಲು ಕಾರ್ಯದರ್ಶಿ ರವರಿಗೆ ಸೂಚಿಸಿದರು. ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾ ನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು, ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಟಿಪ್ಪಣಿಯೊಂದಿಗೆ ದಾಖಲಾತಿಗಳನ್ನು ದೃಢೀಕರಿಸಿ ಕಡತದಲ್ಲಿ ತಪ್ಪದೇ ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಹಾಗೂ ವಾರ್ಡ್ ಕಮಿಟಿ ವಾರ್ಡ್-75 ವಾಟ್ಸ್ ಆಪ್ ಗ್ರೂಪ್ ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ನೋಡಲ್ ಅಧಿಕಾರಿರವರ ಅನುಮೋದನೆ ಮೇರೆಗೆ )

ಕಾರ್ಯದರ್ಶಿ<br>
ಹಾಗೂ ಸಹಾಯಕ ಅಭಿಯಂತರರು,<br>
ವಾರ್ಡ್ ಸಂಖ್ಯೆ: 75

ಪ್ರತಿಯನ್ನು

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

Scanned by CamScanner

| ಕ್ರ. ಸಂ. | ಹೆಸರು | ಪದನಾಮ | ಇಲಾಖೆ | ಮೊ. ಸಂ. | ಸಹಿ |
|---|---|---|---|---|---|
| 1) | [illegible] | SHI | BBMP | 9845512187 | [signature] |
| 2) | Emmanuel Sunder | Ward Marshal | BBMP | 8050602085 | [signature] |
| 3) | Tirish | Asst. Engineer | BESCOM Kurubarahally | 9449865458 | [signature] |
| 4) | N. [illegible] | [illegible] | BBMP | 9035642454 | [signature] |
| 5) | B. Shivappa | P | BWSSB | 9481243320 | [signature] |
| 6) | Hanumantha. V. | WI | B.W.S.S.B | 8050901166 | [signature] |
| 7) | ರವಿ B C | | | 6361780657 | [signature] |
| 8 | [illegible] | | | 7448241243 | [signature] |
| 9 | Puttaswamy | AE | BBMP | 7483162430 | [signature] |
| 10) | Anilkumar [illegible] | JrHI | B.B.mp | 9886344949 | [signature] |
| 11) | Shidrameshwar. RS. | RI. | BBMP. | 9880040294 | [signature] |
| 12 | B.K. Shankarraj | AE, W.3 S/D | BESCOM | 9449870128 | [signature] |

Scanned by CamScanner

| ಕ್ರ. ಸಂ. | ಹೆಸರು | ಪದನಾಮ | ಇಲಾಖೆ | ಮೊ. ಸಂ. | ಸಹಿ |
|---|---|---|---|---|---|
| 13 | Dr. Kusuma | LMO | Health | 9901500116 | |
| 14 | Manjula. S | Jr. H.A.F | Health | 9620277813 | |
| 15 | Manoj. K. | Contractor. | Electrical (BBMP) | 9845783181 | |
| 16 | MANJUNATHA HC | P.S.I. | POLICE (TRAFFIC) | 9620160755 | |
| 17 | Sureshbabu MO | A.S.I | Mahaladam, ¿10 Police Station | 9964067433 | ASI |
| 18 | K.V. LOKESHA | Sr VI | Animal Husbandry | 9480683056 | |
| | | | | | |
| | | | | | |
| | | | | | |
| | | | | | |
| | | | | | |
| | | | | | |

Scanned by CamScanner




Scanned by CamScanner




Scanned by CamScanner




Scanned by CamScanner